ಧಾರವಾಡ ಸೀಮೆಯ ನಂಟನ್ನು, ಬೇರುಗಳನ್ನು ಕೊನೆಯುವರೆಗೂ ಉಳಿಸಿಕೊಂಡವರು ನಾಟಕಕಾರ ಗಿರೀಶ ಕಾರ್ನಾಡ. ಅವರ ಆಪ್ತ ಗೆಳೆಯರೊಬ್ಬರು ಈ ತನಕ ಎಲ್ಲಿಯೂ ದಾಖಲಾಗದ ಹಾಗೂ ತಾವು ಸನಿಹದಿಂದ ಕಂಡು ಒಡನಾಡಿದ ಗಿರೀಶರ ಬದುಕು–ಬರಹಗಳ ನೆನಪುಚಿತ್ರಗಳನ್ನು ಇಲ್ಲಿ ಕೊಟ್ಟಿದ್ದಾರೆ



ಗಿರೀಶ ಕಾರ್ನಾಡರ ಜೊತೆಗಿನ ನನ್ನ ಕೆಲವು ಹಳೆಯ ಸ್ಮರಣಚಿತ್ರಗಳನ್ನು ತೆರೆದು ನೋಡುತ್ತಿದ್ದೇನೆ. ಅವರ ಒಡನಾಟ ಹೊಂದಿದ್ದ ಕೆಲವು ಸ್ನೇಹಿತರು, ಅವರಿಗೆ ಹತ್ತಿರ ಇದ್ದವರು ಇಲ್ಲಿಯ ಹಲವು ಚಿತ್ರಗಳನ್ನು ಕಂಡಿರಬಹುದು, ಕೇಳಿ ತಿಳಿದಿರಬಹುದು. ಆದರೆ, ನನ್ನ ಕಣ್ಣು ಮೂಡಿಸಿಕೊಂಡ ನೆನಪುಚಿತ್ರಗಳು ನನ್ನ ಚಿತ್ತ ಸಂಪುಟದಲ್ಲಿ ಮಾತ್ರ ಇದ್ದಿರುವಂಥವು.

ಕಾರ್ನಾಡರ ವರ್ಣಮಯ ಬದುಕಿನ ಚಿತ್ರಣ ಮತ್ತು ಅವರ ಮುದ್ರಿತ ಸಾಹಿತ್ಯದ ಚರ್ಚೆಗೆ ನಾನು ತೊಡಗುವುದಿಲ್ಲ. ಧಾರವಾಡದಲ್ಲಿ ಗಿರೀಶರೇ ಹುಟ್ಟುಹಾಕಿದ್ದ ಚಿತ್ರಾ ಫಿಲ್ಮ್ ಸೊಸೈಟಿಯ ಸುವರ್ಣ ಸಂಭ್ರಮವನ್ನು ಈಚೆಗೆ ಆಚರಿಸಲಾಯಿತು. 'ತಲೆದಂಡ' ನಾಟಕ ಪ್ರಯೋಗದ ಆಯ್ದ ಭಾಗಗಳನ್ನು, 'ಒಂದಾನೊಂದು ಕಾಲದಲ್ಲಿ', 'ಉತ್ಸವ' ಚಲನಚಿತ್ರಗಳ ಜೊತೆಗೆ ಪ್ರ–ದರ್ಶಿಸುತ್ತ, ರಘು ಕಾರ್ನಾಡ, ಶ್ರೀನಾಥ ಪೆರೂರ, ಮೋಹನ ಅಗಾಸೆ, ಚೆನ್ನಿ, ಚೈತನ್ಯ ಮುಂತಾದವರ ಮಾತು ಕೇಳಿದೆವು. ಕಾರ್ನಾಡರು ಗತಿಸಿ ಎಷ್ಟು ಬೇಗ ಮೂರು ವರ್ಷ ಕಳೆದುವು ಎಂದು ನೆನೆಸಿ ನೊಂದೆವು. ಕಾಲ ಕಳೆದಂತೆ ನೋವಿನ ಬಣ್ಣಗಳು ಮಸುಕಾಗುತ್ತವೆ, ನೆನಪಿನ ಗೆರೆಗಳು ಉಳಿಯುತ್ತವೆ. ಗಿರೀಶರ ಜೊತೆಗಿನ ನನ್ನ ಒಡನಾಟದ ಅಂಥ ಕೆಲವು ಚಿತ್ರಗಳು ಇಲ್ಲಿವೆ. ಇವು ಬಹುತೇಕ ಕಪ್ಪು ಬಿಳುಪಿನವೇ. ಬಣ್ಣದ ಚಂಚಲ ಬದುಕಿಗಿಂತ ನಿಖರ ರೇಖೆಗಳನ್ನು ಬಿಂಬಿಸುವ ಕಪ್ಪು ಬಿಳುಪು ಆಗ ಸಹಜವಾಗಿತ್ತು.

ಕಾರ್ನಾಡರು ಆರಂಭದ ದಿನಗಳಲ್ಲಿ ಚಿತ್ರಾ ಫಿಲ್ಮ್ ಸೊಸೈಟಿಯ ಮೂಲಕ, ಸದಸ್ಯರಾದವರಿಗೆ, ಆಯ್ದ ಶ್ರೇಷ್ಠ ಚಲನಚಿತ್ರಗಳನ್ನು, ನೇರಲೇಕರ್ ಅವರ ಲಕ್ಷ್ಮೀ ಟಾಕೀಜ್‌ದಲ್ಲಿ ತೋರಿಸುವ ವ್ಯವಸ್ಥೆ ಮಾಡಿದ್ದರು. ಕೊನೆಕೊನೆಗೆ, ತಮ್ಮ ಮಿತ್ರ, ಸಂಬಂಧಿಕ, ಸಾರಸ್ವತಪುರದಲ್ಲಿ ಪಕ್ಕದ ಮನೆಯಲ್ಲಿಯೇ ಇದ್ದ, ನಮ್ಮ ಕಾಲೇಜು ವಿದ್ಯಾರ್ಥಿಯೂ ಆಗಿದ್ದ ನಂದನ ನೀಲೇಕಣಿ ಅವರು ಕಟ್ಟಿಸಿ ಕೊಟ್ಟ ರಂಗಮಂದಿರದಲ್ಲಿ ತೋರಿಸಲು ವ್ಯವಸ್ಥೆ ಮಾಡಿದ್ದರು. ಧಾರವಾಡದ ನಮಗೆ ಭಾರತೀಯ ಭಾಷೆಗಳ ಮತ್ತು ವಿದೇಶಿ ಭಾಷೆಗಳ ಚಲನಚಿತ್ರಗಳ, ಉತ್ತಮ ನಟ ನಟಿಯರ, ಮುಖ್ಯವಾಗಿ ಹೆಸರಾಂತ ನಿರ್ದೇಶಕರ ಬಗ್ಗೆ ಪ್ರೇರಕ ಆಸಕ್ತಿ ಮೂಡಿಸಿದ ಕಾರ್ನಾಡರನ್ನು ನಮ್ಮ ಭಾಗದ ಕಲಾಸಕ್ತರು ಮರೆಯಲು ಸಾಧ್ಯವೇ ಇಲ್ಲ. ಕರ್ನಾಟಕ ಕಾಲೇಜಿನಲ್ಲಿ ನನ್ನ ಸಹೋದ್ಯೋಗಿಯಾಗಿದ್ದ ಸಸ್ಯಶಾಸ್ತ್ರ ವಿಭಾಗದ ಶಫಿ ಖಾನ್, ಲಾ ಕಾಲೇಜಿನ ಪ್ರೊ. ಎ.ಆರ್. ದೇಸಾಯಿ, ಕವಿವಿಯ ಡಾ. ಶಾಂತಿನಾಥ ದೇಸಾಯಿ, ಡಾ. ಬಡಿಗೇರ, ನಾನು, ಗ್ರಂಥಮಾಲೆಯ ರಮಾಕಾಂತ ಜೋಶಿ ಮತ್ತು ಎಲ್‌ಐಸಿಯ ಅಬ್ದುಲ್ ಖಾನ್ ಸೇರಿದ ಒಂದು ಸಮಿತಿಯನ್ನು ಮಾಡಿದ್ದರು. ಅದಕ್ಕೆ ಗಿರೀಶರೇ ಅಧ್ಯಕ್ಷರು, ಶಫಿ ಕಾರ್ಯದರ್ಶಿ. ಯಾವ ಚಿತ್ರಗಳನ್ನು, ಎಲ್ಲಿಂದ ತರಿಸಬೇಕು, ಅವರಿಗೆ ಎಷ್ಟು ಹಣ ಸಂದಾಯ ಮಾಡಬೇಕು ಮುಂತಾದ ವ್ಯಾವಹಾರಿಕ ವಿವರಗಳನ್ನು ಗಿರೀಶ, ಶಫಿ ಕೂಡಿ ನಿರ್ಧರಿಸುತ್ತಿದ್ದರು. ಒಮ್ಮೊಮ್ಮೆ ಹೆಚ್ಚಿನ ವೆಚ್ಚ ಬಂದಲ್ಲಿ ಗಿರೀಶರೇ ತಮ್ಮ ಕೈಯಿಂದ ಕೊಡುತ್ತಿದ್ದರು, ಅದನ್ನು ಎಲ್ಲಿಯೂ ಬಾಯಿ

